- ➢ ನಗರದಲ್ಲಿ ಟ್ರೋಮೋಕೇರ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವುದು

**ಬಿ–ಟ್ರ್ಯಾಕ್ ಯೋಜನೆಯ ಅಡಿಯಲ್ಲಿ ಪೋಲೀಸ್ ಇಲಾಖೆಯ ವತಿಯಿಂದ ನೀಡಲಾದ ಕೋರಿಕೆಗಳ ಮೇರೆಗೆ ಕಎಳಕಂಡ ಕೆಲವಾರು ಮುಖ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ**

- ➢ ಹಾಲಿ ಇರುವ 163 ಸಿಗ್ನಲ್ ಜಂಕ್ಷನ್ ಗಳನ್ನು ಉನ್ನತೀಕರಣಗೊಳಿಸಲಾಗಿದೆ
- ➢ 179 ಜಂಕ್ಷನ್‌ಗಳಲ್ಲಿ ಸರ್ವಲೆನ್ಸ್ ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ
- ➢ ನಗರದಲ್ಲಿ 5 ಎನ್‌ಫೋರ್ಸ್‌ಮೆಂಟ್ ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ.
- ➢ ನಗರದ ರಸ್ತೆಗಳಲ್ಲಿ ಸಂಚಾರ ಸೂಚನಾ ಫಲಕಗಳನ್ನು ಅಳವಡಿಸಲಾಗಿರುತ್ತದೆ.
- ➢ ನಗರದ ವಿವಿಧ ಜಂಕ್ಷನ್‌ಗಳಲ್ಲಿ ಮಾಹಿತಿ ಫಲಕಗಳನ್ನು ಅಳವಡಿಸಲಾಗಿರುತ್ತದೆ.

- ನಗರದ ರಸ್ತೆಗಳಲ್ಲಿ ಕ್ಯಾಟ್ ಐಸ್, ಟ್ಯೂಬಿಲಾರ್ ಕೋನ್‌ಗಳು, ಅಬ್ಜಕ್ಟ್ ಮಾರ್ಕರ್‌ಗಳು, ಹೆಜಾರ್ಡ್ ಮಾರ್ಕರ್‌ಗಳು, ರಿಫ್ಲೆಕ್ಟಿವ್ ಮೀಡಿಯನ್ ಮಾರ್ಕರ್‌ಗಳು, ಥರ್ಮೋಪ್ಲಾಸ್ಟಿಕ್ ಬಣ್ಣ ಮುಂತಾದ ಸೌಲಭ್ಯಗಳನ್ನು ಅಳವಡಿಸಲಾಗಿದೆ.
- 199 ಹೊಸ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.
- ಹಲವಾರು ಸ್ಥಳಗಳಲ್ಲಿ 625 ಸೋಲಾರ್ ಬ್ಲಿಂಕರ್ಸ್ ನ ಅಳವಡಿಕೆ
- ಪ್ರಮುಖವಾದ ಸ್ಥಳಗಳಲ್ಲಿ ಪೆಲಿಕಾನ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.
- 5 ಇಂಟರ್ ಸೆಪ್ಟರ್‌ಗಳನ್ನು ಖರೀದಿಸಲಾಗಿದೆ.
- 300 ಸಂಖ್ಯೆ ಬ್ಲಾಕ್‌ಬೆರಿ ಗಳನ್ನು ಖರೀದಿಸಲಾಗಿದೆ
- ಟ್ರಾಫಿಕ್ ಮ್ಯಾನೇಜ್ ಮೆಂಟ್ ಕೇಂದ್ರದಲ್ಲಿ ವಿಡಿಯೋ ವಾಲ್ ನ್ನು ಅಳವಡಿಸಲಾಗಿದೆ.
- 10,000 ಸಂಖ್ಯೆ ಕ್ಯಾಟ್ ಐ ನ ಅಳವಡಿಕೆ
- 1000 ಸಂಖ್ಯೆ ಟ್ರಾಫಿಕ್ ಬ್ಯಾರಿಕೇಡರ್ ಗಳನ್ನು ಖರೀದಿಸಲಾಗಿದೆ.

ಈ ಯೋಜನೆಯ ಸಲುವಾಗಿ ವಾರ್ಷಿಕವಾರು ಠೇವಣಿ ಹಾಗೂ ಖರ್ಚಿನ ಬಗ್ಗೆ ಮಾಹಿತಿಯನ್ನು ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

(ರೂ ಕೋಟಿಗಳಲ್ಲಿ)

| **ಕ್ರ.ಸಂ** | **ವರ್ಷ** | **ಠೇವಣಿಯಾಗಿ ಸ್ವೀಕರಿಸಿದ ಮೊಬಲಗು** | **ಖರ್ಚಾದ ಮೊಬಲಗು** | **ದಿನಾಂಕ: 31-03-2014 ಕ್ಕೆ ಉಳಿದಿರುವ ಮೊಬಲಗು** |
|---|---|---|---|---|
| 1 | 2006–07 | 44.00 | 0.14 | |
| 2 | 2007–08 | 0.00 | 19.76 | |
| 3 | 2008–09 | 35.00 | 26.98 | |
| 4 | 2009–10 | 40.00 | 32.92 | |
| 5 | 2010–11 | 5.00 | 27.66 | |
| 6 | 2011–12 | 15.00 | 11.73 | |
| 7 | 2012–13 | 25.00 | 12.62 | |
| 8 | 2013–14 | 0.00 | 20.89 | 11.39 |
| | **ಒಟ್ಟು** | **164.00** | **152.70** | **11.39** |

## ಅನುಬಂಧ– 7
## ರಾಷ್ಟ್ರೀಯ ಹೆದ್ದಾರಿಗಳು

ರಾಜ್ಯದಲ್ಲಿ ಇರುವ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಯು, ರಾಜ್ಯ ಸರ್ಕಾರದ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿದ್ದು ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ. ಈ ಕೆಳಕಂಡ 17 ರಾಷ್ಟ್ರೀಯ ಹೆದ್ದಾರಿಗಳು ಕರ್ನಾಟಕ ರಾಜ್ಯದಲ್ಲಿ ಹಾದು ಹೋಗುತ್ತದೆ

| ಕ್ರಮ ಸಂಖ್ಯೆ | ರಾಹೆ ಸಂಖ್ಯೆ | ಹೆಸರು | ಒಟ್ಟು ಉದ್ದ (ಕಿಮಿ) | NHAI ಅಡಿಯಲ್ಲಿ ಉದ್ದ | ನಗರ ಸಭೆ ಅಡಿಯಲ್ಲಿ ಉದ್ದ | ಓವರ್ ಲ್ಯಾಪಿಂಗ್ ಉದ್ದ | ರಾಷ್ಟ್ರೀಯ ಹೆದ್ದಾರಿ ಅಡಿಯಲ್ಲಿ ಉದ್ದ |
|---|---|---|---|---|---|---|---|
| 1. | 4 | ಕೋಲಾರ–ಬೆಂಗಳೂರು – ಬೆಳಗಾಂ – ಪುಣೆ | 699.59 | 683.09 | 16.50 | – | – |
| 2. | 7 | ಬನಾರಸ್ – ನಾಗಪುರ – ಹೈದ್ರಾಬಾದ್ – ಕರ್ನೂಲ್ – ಬಾಗೇಪಲ್ಲಿ – ಬೆಂಗಳೂರು – ಹೊಸೂರು – ಕೃಷ್ಣಗಿರಿ – ಸೇಲಂ – ಮಧುರೈ – ಕನ್ಯಾಕುಮಾರಿ | 134.01 | 119.02 | 15.00 | – | – |
| 3. | 4(ಎ) | ಬೆಳಗಾಂ – ಖಾನಾಪುರ – ಅನಮೋಡ – ಪಣಜಿ | 84.12 | 84.12 | – | – | – |
| 4. | 9 | ಪುಣೆ – ಸೋಲಾಪುರ – ಹುಮ್ನಾಬಾದ್ – ಹೈದ್ರಾಬಾದ್ – ವಿಜಯವಾಡ | 75.01 | – | – | – | 75.01 |
| 5. | 13 | ಸೋಲಾಪುರ – ಚಿತ್ರದುರ್ಗ – ಶಿವಮೊಗ್ಗ – ಮಂಗಳೂರು | 714.66 | 319.10 | – | 6.40 | 389.16 |
| 6. | 17 | ಪನವೇಲ್ – ಪಣಜಿ – ಕಾರವಾರ – ಕುಂದಾಪುರ – ಉಡುಪಿ – ಮಂಗಳೂರು – ಕಣ್ಣನೂರು – ಕಲ್ಲಿಕೋಟೆ – ತ್ರಿಚೂರು | 300.10 | 296.50 | 3.60 | – | – |
| 7. | 48 | ಬೆಂಗಳೂರು – ನೆಲಮಂಗಲ – ಕುಣಿಗಲ್ – ಹಾಸನ – ಸಕಲೇಶಪುರ – ಮಂಗಳೂರು | 319.50 | 181.00 | – | – | 138.50 |
| 8. | 63 | ಅಂಕೋಲ – ಹುಬ್ಬಳ್ಳಿ – ಗದಗ – ಹೊಸಪೇಟೆ – ಬಳ್ಳಾರಿ – ಗುತ್ತಿ – (ಆಂಧ್ರಪ್ರದೇಶ) | 386.60 | – | – | 9.60 | 359.00 |
| 9. | 67 | ಮೆಟ್ಟುಪಾಳ್ಯಂ – ಊಟಿ – ಗುಂಡ್ಲುಪೇಟೆ | 26.10 | – | – | – | 26.10 |
| 10. | 206 | ತುಮಕೂರು – ಶಿವಮೊಗ್ಗ – ಹೊನ್ನಾವರ | 370.63 | – | – | – | 370.63 |
| 11. | 207 | ಹೊಸೂರು – (ರಾಹೆ – 7) – ಸರ್ಜಾಪುರ – ದೇವನಹಳ್ಳಿ – ದೊಡ್ಡಬಳ್ಳಾಪುರ – ದಾಬಸ್‌ಪೇಟೆ – (ರಾಹೆ – 4) | 122.38 | 81.10 | – | 2.50 | 38.78 |
| 12. | 209 | ಬೆಂಗಳೂರು – ಕೊಳ್ಳೇಗಾಲ – ಚಾಮರಾಜನಗರ – ಸತ್ಯಮಂಗಲ – ಹೊನ್ನೂರು – ಕೊಯಿಮತ್ತೂರು – ಪೊಲ್ಲಚ್ಚಿ – ದಿಂಡಗಲ್ಲು | 203.52 | – | – | – | 203.52 |
| 13. | 212 | ಕಲ್ಲಿಕೋಟೆ – ಮೈಸೂರು – ಕೊಳ್ಳೇಗಾಲ | 151.00 | – | – | – | 151.00 |
| 14. | 218 | ಹುಬ್ಬಳ್ಳಿ – ಬಿಜಾಪುರ – ಜೇವರ್ಗಿ – ಹುಮನಾಬಾದ್ | 412.00 | – | – | – | 412.00 |
| 15. | 234 | ಮಂಗಳೂರು – ಬೇಲೂರು – ಶಿರಾ – ಮಧುಗಿರಿ – ಚಿಂತಾಮಣಿ – ಮಳುಬಾಗಿಲು – ಆಂಧ್ರಪ್ರದೇಶ – ಗಡಿ | 509.50 | – | – | 20.15 | 489.35 |
| 16 | 150 | ಗುಲ್ಬರ್ಗಾ – ಯಾದಗೀರ್ – ಕೃಷ್ಣ | 125.30 | – | – | – | 125.30 |
| 17 | 167 | ಹಗರಿಯಿಂದ ರಾಯಚೂರು ಮೆಹಬೂಬ್‌ನಗರ – ಜಡ್‌ಚರ್ಲ | 72.57 | – | – | – | 72.57 |
| | | **ಒಟ್ಟು** | **4706.59** | **1763.93** | **35.10** | **38.65** | **2850.92** |

ಒಟ್ಟು 1668.00 ಕಿ.ಮೀ. ಉದ್ದದ ಏಳು ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಭೂ ಸಾರಿಗೆ ಮಂತ್ರಾಲಯವು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ.

1987–88ನೇ ಸಾಲಿನಿಂದ ರಾಷ್ಟ್ರೀಯ ಹೆದ್ದಾರಿಗಳಿಗೆ ಲಭ್ಯವಾದ ಅನುದಾನ ಮತ್ತು ವೆಚ್ಚದ ವಿವರ ಕೆಳಕಂಡಂತಿದೆ. ಈ ವೆಚ್ಚವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ

**ರೂ. ಲಕ್ಷಗಳಲ್ಲಿ** .

| **ವರ್ಷ** | **ಮೂಲ ಕಾಮಗಾರಿ** | | **ಉಸ್ತುವಾರಿ ನಿರ್ವಹಣೆ ಮತ್ತು ದುರಸ್ತಿ** | |
|---|---|---|---|---|
| | **ಅನುದಾನ** | **ವೆಚ್ಚ** | **ಅನುದಾನ** | **ವೆಚ್ಚ** |
| 1987 – 88 | 1450.00 | 1456.57 | 444.49 | 619.19 |
| 1988 – 89 | 1625.00 | 1657.33 | 622.79 | 793.52 |
| 1989 – 90 | 1800.00 | 1816.72 | 671.77 | 847.91 |
| 1990 – 91 | 1800.00 | 1920.43 | 767.83 | 885.03 |
| 1991 – 92 | 1775.00 | 2636.39 | 990.00 | 1189.33 |
| 1992 – 93 | 1850.00 | 1847.98 | 1105.85 | 1677.57 |
| 1993 – 94 | 2900.00 | 2131.74 | 1242.94 | 1088.02 |
| 1994 – 95 | 3189.00 | 2871.85 | 1509.40 | 1160.41 |
| 1995 – 96 | 3319.99 | 2965.69 | 1770.49 | 1209.91 |
| 1996 – 97 | 3530.54 | 4322.92 | 2457.80 | 2467.80 |
| 1997 – 98 | 4411.03 | 4413.57 | 3059.00 | 3066.52 |
| 1998 – 99 | 4908.05 | 4014.21 | 3112.00 | 3026.00 |
| 1999 – 2000 | 6113.76 | 5594.21 | 3921.04 | 3931.21 |
| 2000 – 01 | 9795.16 | 9461.63 | 3097.67 | 3086.02 |
| 2001 – 02 | 10982.55 | 10805.29 | 3902.45 | 3983.16 |
| 2002 – 03 | 8970.97 | 9504.08 | 4582.28 | 4644.56 |
| 2003 – 04 | 15034.83 | 16613.29 | 3873.07 | 3806.65 |
| 2004 – 05 | 76905.00 | 76905.00 | 3582.00 | 3535.00 |
| 2005 – 06 | 8861.22 | 8863.96 | 4143.80 | 4200.11 |
| 2006 – 07 | 8890.95 | 8635.00 | 3988.00 | 4018.46 |
| 2007 – 08 | 9950.00 | 9950.00 | 5943.81 | 6030.75 |
| 2008 – 09 | 19951.33 | 21518.59 | 7124.30 | 7327.17 |
| 2009 – 10 | 30527.00 | 30527.00 | 6476.00 | 6010.19 |
| 2010 – 11 | 26000.00 | 27623.64 | 6850.00 | 7151.04 |
| 2011–12 | 33000.00 | 31323.65 | 5259.00 | 5675.16 |
| 2012–13 | 30907.00 | 29680.17 | 11604.00 | 11913.06 |
| 2013–2014 | 24461.43 | 16428.93 | 7003.00 | 6697.08 |

**1987–88 ರಿಂದ 2013–14 ರವರೆಗೆ ಕೇಂದ್ರ ರಸ್ತೆ ನಿಧಿ : ಅಂತರ ರಾಜ್ಯ : ಆರ್ಥಿಕ ಪ್ರಾಮುಖ್ಯತಾ ಯೋಜನೆಯಲ್ಲಿ ದೊರಕಿರುವ ಅನುದಾನ ಮತ್ತು ವೆಚ್ಚದ ವಿವರಗಳು**

ರೂ. ಲಕ್ಷಗಳಲ್ಲಿ

| | ಅಂತರ ರಾಜ್ಯ ಪ್ರಾಮುಖ್ಯತೆ ಯೋಜನೆ | | ಆರ್ಥಿಕ ಪ್ರಾಮುಖ್ಯತೆ ಯೋಜನೆ | | ಅಲೋಕೇಶನ್ (ಕೇಂದ್ರ ರಸ್ತೆ ನಿಧಿ) | | ಆರ್ಡಿನರಿ ರಿಸರ್ವ್ | |
|---|---|---|---|---|---|---|---|---|
| | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| 1 | 2 | 3 | 4 | 5 | 6 | 7 | 8 | 9 |
| 1987 – 88 | 70.10 | 38.42 | 80.00 | 92.49 | 96.10 | 45.69 | 10.00 | 0.55 |
| 1988 – 89 | 54.00 | 31.97 | 80.00 | 108.58 | 93.90 | 28.04 | 45.60 | 0.93 |
| 1989 – 90 | 40.10 | 20.92 | 80.00 | 120.46 | – | 55.45 | 47.61 | 3.55 |
| 1990 – 91 | 45.20 | 18.92 | 70.00 | 129.68 | 96.20 | 56.38 | 39.88 | 16.08 |
| 1991 – 92 | 30.20 | 18.88 | 80.00 | 95.59 | 131.25 | 68.72 | 60.62 | 19.83 |
| 1992 – 93 | 40.00 | 21.78 | 90.00 | 117.54 | 224.00 | 197.76 | 15.00 | 18.12 |
| 1993 – 94 | 6.57 | 6.59 | 63.45 | 63.45 | 172.00 | 176.61 | 7.22 | 7.22 |
| 1994 – 95 | 1.26 | 3.23 | 78.24 | 80.90 | 131.86 | 131.88 | 2.06 | 2.07 |
| 1995 – 96 | 70.00 | 2.11 | 30.00 | 102.89 | 90.00 | 153.25 | 10.00 | 4.56 |
| 1996 – 97 | 60.00 | 40.02 | 45.00 | 5.00 | 80.00 | 130.55 | 20.00 | – |
| 1997 – 98 | 599.50 | 207.00 | 600.50 | 348.00 | 125.99 | 53.45 | – | – |
| 1998 – 99 | 700.00 | 505.00 | 1000.00 | 882.00 | 130.00 | 128.00 | – | – |
| 1999 – 2000 | 530.00 | 530.07 | 800.00 | 776.54 | 240.00 | 107.02 | – | – |
| 2000 – 01 | 770.00 | 714.75 | 40.00 | 218.99 | 460.00 | 123.92 | – | – |
| 2001 – 02 | 525.00 | 531.31 | 990.00 | 1007.93 | 3256.00 | 3164.56 | – | – |
| 2002 – 03 | 400.00 | 386.32 | 5.00 | 7.94 | 2750.00 | 3037.40 | – | – |
| 2003 – 04 | 20.00 | 9.26 | 210.00 | 209.27 | 1355.50 | 2583.46 | – | – |
| 2004 – 05 | 39.89 | – | 1425.53 | 578.46 | 7079.03 | 5566.51 | – | – |
| 2005 – 06 | 474.87 | 269.11 | 928.10 | 401.44 | 8065.43 | 7368.80 | – | – |
| 2006 – 07 | 1385.00 | 1469.46 | 1350.00 | 1427.80 | 8025.82 | 8065.43 | – | – |
| 2007 – 08 | 2514.00 | 1927.41 | 2330.00 | 1829.77 | 8186.00 | 8081.87 | – | – |
| 2008 – 09 | 2087.00 | 2087.00 | 998.00 | 990.00 | 5640.53 | 5639.89 | – | – |
| 2009 – 10 | 1774.00 | 1771.50 | 1376.00 | 1376.00 | 11708.00 | 11708.00 | – | – |
| 2010 – 11 | 650.00 | 650.00 | 1200.00 | 1200.00 | 5000.00 | 5000.00 | – | – |
| 2011 – 12 | 1700.00 | 1700.00 | 1600.00 | 1600.00 | 17300.00 | 17252.00 | – | – |
| 2012–13 | 1600.00 | 1600.00 | 21.00 | 21.00 | 10617.99 | 10617.99 | – | – |
| 2013–14 | 1950.00 | 1699.65 | 50.00 | 2.66 | 22000.00 | 18499.00 | – | – |
| | | | | | | | | |

**ರಾಷ್ಟ್ರಿಯ ಹೆದ್ದಾರಿ ವಲಯದ ಯೋಜನೆಗಳು.**

ಮೂಲಕಾಮಗಾರಿಗಳ ಯೋಜನೆಯಡಿ ಒಂದು ಭಾರಿ ಸೇತುವೆಯನ್ನು ನಿರ್ಮಿಸಿದ್ದು 180.00 ಕಿ.ಮೀ. ರಸ್ತೆ ಸುದಾರಣೆ ರೂ. 164.00 ಕೋಟಿ ವೆಚ್ಚದಲ್ಲಿ ನಿರ್ವಹಿಸಲಾಗಿದೆ. ನಿಯತಕಾಲಿಕ ನವೀಕರಣದಡಿ (ಪಿ.ಆರ್) 125.00 ಕಿ.ಮೀ. ಉದ್ದ ಮರು ಡಾಂಬರೀಕರಣವನ್ನು ರೂ. 44.00 ಕೋಟಿ ವೆಚ್ಚದಲ್ಲಿ ನಿರ್ವಹಿಸಲಾಗಿದೆ.

**ಕೇಂದ್ರ ರಸ್ತೆ ನಿಧಿ ಯೋಜನೆ (ಸಿಆರ್ಎಫ್) ರಾಜ್ಯ ರಸ್ತೆ ಕಾಮಗಾರಿಗಳು**

ರಾಜ್ಯದಲ್ಲಿ ಮಾರಾಟವಾಗುವ ಡೀಸೆಲ್ ಮತ್ತು ಪೆಟ್ರೋಲ್‌ಗಳ ಮೇಲೆ ಲೀಟರ್ ಒಂದಕ್ಕೆ 1.00 ರೂನಂತೆ ವಿಧಿಸಲಾಗುತ್ತಿರುವ ಸುಂಕದಿಂದ ಕೇಂದ್ರ ರಸ್ತೆ ನಿಧಿಯನ್ನು ಸ್ಥಾಪಿಸಲಾಗಿದ್ದು ಇದರಲ್ಲಿ ರಾಜ್ಯಕ್ಕೆ ಒದಗಿಸಲಾಗುವ ಮೊತ್ತಕ್ಕೆ ಕಾಮಗಾರಿಗಳು ಕೈಗೊಳ್ಳಲಾಗುತ್ತದೆ. 2013–14ನೇ ಸಾಲಿಗೆ ಸದರಿ ಯೋಜನೆಗೆ ಆಯವ್ಯಯದಲ್ಲಿ ರೂ.12000.00 ಲಕ್ಷ ಅನುದಾನ ಒದಗಿಸಲಾಗಿದ್ದು , ಪೂರಕ ಅಂದಾಜಿನಲ್ಲಿ – 3 ರಲ್ಲಿ ರೂ.10000.00 ಲಕ್ಷ ಒಟ್ಟಾರೆ ರೂ.22000.00 ಲಕ್ಷ ಅನುದಾನ ಒದಗಿಸಿದ್ದು ರೂ.18499.00 ಲಕ್ಷ ವೆಚ್ಚದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಸದರಿ ಯೋಜನೆಯಡಿ 2013–14ನೇ ಸಾಲಿಗೆ 1000.00 ಕೋಟಿ ಮೊತ್ತದ 256 ಹೊಸ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ನೀಡಿದ್ದು

1521.00 ಕಿ,ಮೀ, ಉದ್ದದ ರಸ್ತೆಯನ್ನು ಮತ್ತು ಎರಡು ಸೇತುವೆಗಳನ್ನು ನಿರ್ವಹಿಸಲು ಯೋಜಿಸಲಾಗಿದೆ ಪ್ರಸ್ತುತ 22 ಕಾಮಗಾರಿಗಳನ್ನು ಪ್ರಾರಂಭಿಸಿದ್ದು 41.00 ಕಿ.ಮೀ. ರಸ್ತೆ ಸುಧಾರಣೆಯನ್ನು ಮಾಡಲಾಗಿದೆ.

**ಅಂತರ ರಾಜ್ಯ ಪ್ರಾಮುಖ್ಯತೆಯುಳ್ಳ ರಸ್ತೆಗಳು (ಯೋಜನೆ)**

ಸದರಿ ಯೋಜನೆಯಡಿ ಅಂತರ ರಾಜ್ಯಗಳ ಸಂಪರ್ಕ ಕಲ್ಪಿಸುವಂತಹ ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯು ಕೇಂದ್ರ ಯೋಜನೆಯಾಗಿದ್ದು ಶೇ.100 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರದ ವತಿಯಿಂದ ಒದಗಿಸಲಾಗುತ್ತದೆ. ಎರಡು ಸೇತುವೆಗಳು ಪ್ರಗತಿಯಲ್ಲಿದ್ದು ಒಂದು ರಸ್ತೆ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆ. 2013–14ನೇ ಸಾಲಿಗೆ ಪ್ರಾರಂಭದಲ್ಲಿ ರೂ.1000.00 ಲಕ್ಷ ಅನುದಾನ ಒದಗಿಸಿದ್ದು, ತದನಂತರ ರೂ.950.00 ಲಕ್ಷ ಪುನರ್ವಿನಿಯೋಗ ಮಾಡಿಕೊಂಡಿದ್ದು , ಒಟ್ಟಿಗೆ ರೂ.1950.00 ಲಕ್ಷಗಳ ಅನುದಾನದಲ್ಲಿ ರೂ. 1699.65 ವೆಚ್ಚದಲ್ಲಿ ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆ ಕಾಮಗಾರಿಗಳಿಗಾಗಿ ಪೂರ್ಣವಾಗಿ ವೆಚ್ಚ ಮಾಡಲಾಗಿದೆ.

**ಶಿರಾಡಿ ಘಾಟ್**

ರಾಷ್ಟ್ರೀಯ ಹೆದ್ದಾರಿ – 48 ಕಿ.ಮೀ. 237.00 ರಿಂದ 250.620 ರವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕಾಗಿ ರೂ. 46.48 ಕೋಟಿ ಅಂದಾಜುಪಟ್ಟಿಗೆ ಕೇಂದ್ರ ಭೂಸಾರಿಗೆ ಮಂತ್ರಾಲಯ ಅನುಮೋದಿಸಿದ್ದು ಆರ್ಥಿಕ ಬಿಡ್‌ನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದಲ್ಲಿ ಅನುಮೋದಿಸುವ ಹಂತದಲ್ಲಿರುತ್ತದೆ.

ಶಿರಾಡಿ ಘಾಟ್‌ನ್ನು ಸುರಂಗ ಮಾರ್ಗವಾಗಿ ಪರಿವರ್ತಿಸಲು ಟಿ.ಓ.ಆರ್. ಗೆ ಕೇಂದ್ರ ಭೂ ಸಾರಿಗೆ ಮಂತ್ರಾಲಯದಿಂದ ಅನುಮೋದನೆ ಪಡೆಯಲಾಗಿದ್ದು ಟೆಂಡರನ್ನು ಆಹ್ವಾನಿಸಲಾಗಿದೆ.

## ಅಧ್ಯಾಯ 8
## ಯೋಜನಾ ಅನುಷ್ಠಾನ ಘಟಕ
## ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

### I. ಯೋಜನೆ :

ರಾಜ್ಯ ಸರ್ಕಾರವು ರಾಜ್ಯದ ಮುಖ್ಯ ರಸ್ತೆ ಸಂಪರ್ಕ ಜಾಲದ 10500 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿ / ಸುಧಾರಣೆ ಮಾಡುವ ಸಲುವಾಗಿ ಯೋಜನೆಯನ್ನು ಅನುಮೋದಿಸಿದ್ದು, ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ಲಭ್ಯ ಉಪಕರಣವನ್ನು (Available machinery) ಉಪಯೋಗಿಸಿಕೊಂಡು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಶಿಪ್)ಯ ಮಾದರಿಯಲ್ಲೇ ಕೈಗೊಳ್ಳುವ ಬಗ್ಗೆ ಯೋಜಿಸಿ 2 ವರ್ಷಗಳಲ್ಲಿ ಪೂರ್ಣಗೊಳಿಸುವ ಬಗ್ಗೆ ಕಾರ್ಯರೂಪಿಸಿರುತ್ತದೆ. ಈ ಯೋಜನಾ ವೆಚ್ಚವನ್ನು ರಾಜ್ಯ ಸರ್ಕಾರವೇ ಪೂರ್ಣವಾಗಿ ಭರಿಸುತ್ತದೆ.

### II. ಯೋಜನೆಯ ಮುಖ್ಯಾಂಶಗಳು:

1. ಈ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸುವ ರಸ್ತೆಗಳ ಭಾಗಗಳ ಆಯ್ಕೆ, ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗಳನ್ನು ಅಖೈರುಗೊಳಿಸುವ ಪ್ರಸ್ತಾವನೆಗಳನ್ನು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯು ನಿರ್ಣಯಿಸಲಾಗುತ್ತದೆ.
2. ಈ ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಯೋಜನಾ ರೂಪದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
3. ಸರ್ಕಾರದ ಆದೇಶ ಸಂಖ್ಯೆ:ಲೋಇ.45ಇಎಪಿ2011 ಬೆಂಗಳೂರು ದಿ:04.11.2011ರಲ್ಲಿ ಈ ಯೋಜನೆಯ ಉಸ್ತುವಾರಿಗಾಗಿ ಕೆಶಿಪ್ ಮಾದರಿಯಲ್ಲಿ ಯೋಜನಾ ಅನುಷ್ಠಾನ ಘಟಕವನ್ನು ಸ್ಥಾಪಿಸಿರುತ್ತದೆ.
4. ಪ್ರಮುಖವಾಗಿ ಜಿಲ್ಲೆಯಿಂದ ಜಿಲ್ಲೆಗೆ, ತಾಲ್ಲೂಕಿನಿಂದ ತಾಲ್ಲೂಕಿಗೆ ಸಂಪರ್ಕಿಸುವ ರಸ್ತೆಗಳ ಸುಧಾರಣೆ ಅಥವಾ ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದೆ.
5. ಈ ಯೋಜನೆಯ ಮೇಲ್ವಿಚಾರಣೆಗಾಗಿ ಯೋಜನಾ ಸಮನ್ವಯ ಸಲಹೆಗಾರರ ನೇಮಕ, ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿ ರಚನೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯವರ ಅಧ್ಯಕ್ಷತೆಯಲ್ಲಿ ಸೃಜಿಸಿರುವ ಟೆಂಡರ್ ಅನುಮೋದನಾ ಸಮಿತಿಯಲ್ಲಿ ಟೆಂಡರ್ ಅನುಮೋದನೆ ಹಾಗೂ ಸ್ಟೀರಿಂಗ್ ಸಮಿತಿ ಸಭೆಯ ಅಧ್ಯಕ್ಷತೆಯಲ್ಲಿ ಮೇಲ್ವಿಚಾರಣೆ ಮಾಡಲಾಗುವುದು.

### III. ಯೋಜನೆಯ ವಿವರ:

1. ದಿನಾಂಕ:16.11.2011ರಲ್ಲಿ ನಡೆಸಲಾದ ಉನ್ನತ ಮಟ್ಟದ ಸಮಿತಿಯ ಸಭೆಯಲ್ಲಿ ಒಟ್ಟಾರೆಯಾಗಿ 7254ಕಿ.ಮೀ ಉದ್ದದ ರಸ್ತೆಯನ್ನು ರೂ.2797.00ಕೋಟಿ ಮೊತ್ತದಲ್ಲಿ (4132.64ಕಿ.ಮೀ ಉದ್ದದ ರಸ್ತೆಯ ಸುಧಾರಣೆಯನ್ನು ರೂ.2192.66ಕೋಟಿ ಮೊತ್ತದಲ್ಲಿ ಮತ್ತು 3121.76ಕಿಮೀ ಉದ್ದದ ಮರುಡಾಂಬರೀಕರಣವನ್ನು ರೂ604.61ಕೋಟಿ ಮೊತ್ತದಲ್ಲಿ) ಕೈಗೊಳ್ಳಲು ಅನುಮೋದನೆ ನೀಡಿರುತ್ತದೆ.

2. ಉನ್ನತ ಮಟ್ಟದ ಸಮಿತಿಯು ಅಭಿವೃದ್ಧಿಪಡಿಸಲು ಗುರುತಿಸಿರುವ ರಾಜ್ಯಹೆದ್ದಾರಿಗಳ ಭಾಗಗಳಿಗೆ ವಿವರವಾದ ಯೋಜನಾ ವರದಿಗಳನ್ನು ಲೋಕೋಪಯೋಗಿ ಇಲಾಖೆಯ ದಕ್ಷಿಣ ಮತ್ತು ಉತ್ತರ ವಲಯಗಳ ಮೇಲ್ವಿಚಾರಣೆಯಲ್ಲಿ ಖಾಸಗಿ ಸಲಹೆಗಾರರ ಮೂಲಕ ತಯಾರಿಸಲಾಗಿರುತ್ತದೆ. ಈ ರಸ್ತೆಗಳ ಭಾಗಗಳನ್ನು ಅಭಿವೃದ್ಧಿಪಡಿಸಲು ಜಿಲ್ಲೆಯಿಂದ ಜಿಲ್ಲೆಗೆ, ಜಿಲ್ಲೆಯಿಂದ ತಾಲ್ಲೂಕಿಗೆ ಸಂಪರ್ಕಿಸುವ ರಸ್ತೆಯನ್ನು ಪರಿಗಣಿಸಲಾಗಿರುತ್ತದೆ.

3. ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.

**ಮೊದಲನೇ ಹಂತ :**

- ಕಾಮಗಾರಿಗಳನ್ನು 66 ಪ್ಯಾಕೇಜ್‌ಗಳಲ್ಲಿ ವಿಂಗಡಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಲೋಇ 45 ಇಎಪಿ 2012 ಬೆಂಗಳೂರು ದಿನಾಂಕ:09.05.2012 ಮತ್ತು ಲೋಇ 121 ಇಎಪಿ 2012 ದಿನಾಂಕ:19.11.2012 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಈ 66 ಪ್ಯಾಕೇಜುಗಳ ಕಾಮಗಾರಿಗಳಲ್ಲಿ 3567 ಕಿಮೀ. ಉದ್ದದ ರಸ್ತೆಯನ್ನು 1439.00 ಕೋಟಿ ರೂ. ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ (ಸುಧಾರಣೆ 2110 ಕಿಮೀ ಹಾಗೂ ನವೀಕರಣ 1457 ಕಿಮೀ).
- ಈ ಎಲ್ಲಾ ಪ್ಯಾಕೇಜುಗಳಿಗೆ ಟೆಂಡರುಗಳನ್ನು ಅನುಮೋದಿಸಿದ್ದು ಕಾಮಗಾರಿಗಳು ವಿವಿಧ ಹಂತಗಳಲ್ಲಿರುತ್ತದೆ.
- ಮಾರ್ಚ್ 2014 ರವರೆಗೆ 2781 ಕಿಮೀ ಉದ್ದದಲ್ಲಿ ಕಾಮಗಾರಿ ಪೂರ್ಣಗೊಂಡಿರುತ್ತದೆ.

**ಎರಡನೇ ಹಂತ :**

- ಕಾಮಗಾರಿಗಳನ್ನು 70 ಪ್ಯಾಕೇಜ್‌ಗಳಲ್ಲಿ ವಿಂಗಡಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 107 ಇಎಪಿ 2012 ಬೆಂಗಳೂರು ದಿನಾಂಕ:19.05.2013 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಈ 70 ಪ್ಯಾಕೇಜುಗಳ ಕಾಮಗಾರಿಗಳಲ್ಲಿ 3745 ಕಿಮೀ. ಉದ್ದದ ರಸ್ತೆಯನ್ನು ರೂ.1498.90 ಕೋಟಿ ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ (ಸುಧಾರಣೆ 2188 ಕಿಮೀ ಹಾಗೂ ನವೀಕರಣ 1557 ಕಿಮೀ).
- ಈ ಎಲ್ಲಾ ಪ್ಯಾಕೇಜುಗಳಿಗೆ ಟೆಂಡರುಗಳನ್ನು ಅನುಮೋದಿಸಿದ್ದು ಕಾಮಗಾರಿಗಳು ವಿವಿಧ ಹಂತಗಳಲ್ಲಿರುತ್ತದೆ.
- ಈ ಕಾಮಗಾರಿಗಳನ್ನು 11 ತಿಂಗಳೊಳಗಾಗಿ ಪೂರ್ಣಗೊಳಿಸಲು ಕ್ರಿಯಾ ಯೋಜನೆಯನ್ನು ಹಮ್ಮಿಕೊಂಡಿದ್ದು, ಮಾರ್ಚ್ 2014 ರವರೆಗೆ 805ಕಿಮೀ ಉದ್ದದಲ್ಲಿ ಕಾಮಗಾರಿ ಪೂರ್ಣಗೊಂಡಿರುತ್ತದೆ.

## IV. ಯೋಜನಾ ಮೇಲುಸ್ತುವಾರಿಗಾಗಿ ಯೋಜನಾ ಸಲಹೆಗಾರರ ನೇಮಕ :

ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಯೋಜನಾ ರೂಪದಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಕಾಮಗಾರಿಗಳ ಉಸ್ತುವಾರಿಗಾಗಿ ಯೋಜನಾ ಉಸ್ತುವಾರಿ ಸಮಾಲೋಚಕರನ್ನು ಎಲ್ಲಾ 9 ಲೋಕೋಪಯೋಗಿ ಇಲಾಖಾ ವೃತ್ತ ವ್ಯಾಪ್ತಿಯಲ್ಲಿ ನೇಮಿಸಲಾಗಿದೆ. ಯೋಜನಾ ಸಲಹೆಗಾರರಿಗೆ ಪ್ರಮುಖವಾಗಿ ಯೋಜನಾ ಅನುಷ್ಠಾನ ಮೇಲ್ವಿಚಾರಣೆ, ಗುಣನಿಯಂತ್ರಣ ಪರೀಕ್ಷೆಗಳ ಉಸ್ತುವಾರಿ, ಇಂಜಿನಿಯರಿಂಗ್ ವಿನ್ಯಾಸ, ನಕ್ಷೆ ಹಾಗೂ ವಿಶ್ಲೇಷಣೆಗಳಂತೆ ಉನ್ನತ ಗುಣಮಟ್ಟದ ರಸ್ತೆ ನಿರ್ಮಾಣ, ಗುತ್ತಿಗೆ ಆಡಳಿತ ಇತ್ಯಾದಿ ಕಾರ್ಯ ಚಟುವಟಿಕೆಗಳನ್ನು ನಿಗಧಿಪಡಿಸಲಾಗಿದೆ.

## V. ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಸಾಫ್ಟ್‌ವೇರ್ (PMS)

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯನ್ನು ಸಮಗ್ರವಾಗಿ ಮಾನಿಟರಿಂಗ್ ಮಾಡಲು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (PMS) Software ನ್ನು ಇಲಾಖೆಯಲ್ಲಿ ಅಳವಡಿಸಲಾಗಿರುತ್ತದೆ. ಈ Software ಅನ್ನು ಡಾಟ್‌ನೆಟ್ (Dotnet) ಚೌಕಟ್ಟಿನಲ್ಲಿ ಅಭಿವೃದ್ಧಿಪಡಿಸಿ, ಪ್ರಾಜೆಕ್ಟ್ ಮಾನಿಟರಿಂಗ್ ಸರ್ವರ್‌ನಲ್ಲಿ ಅಳವಡಿಸಲಾಗಿದೆ. ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನಲ್ಲಿ ಯೋಜನೆ, ಮಾನಿಟರಿಂಗ್, ಗುಣನಿಯಂತ್ರಣ ಮತ್ತು ಗುತ್ತಿಗೆ ಆಡಳಿತಗಳು ಪ್ರಮುಖ ಮಾಡ್ಯೂಲ್‌ಗಳಾಗಿದ್ದು, ಇವುಗಳ ಮೂಲಕ ಯೋಜನಾ ಚಟುವಟಿಕೆ, ದಿನನಿತ್ಯದ ಚಟುವಟಿಕೆಗಳು ಮತ್ತು ಛಾಯಚಿತ್ರಗಳು, ಗುಣನಿಯಂತ್ರಣ ಪರೀಕ್ಷೆಗಳನ್ನು ಕಾಮಗಾರಿ ನಡೆಯುತ್ತಿರುವ ಸ್ಥಳದಿಂದ Mobile Application ಮೂಲಕ Upload ಮಾಡಬಹುದಾಗಿರುತ್ತದೆ.

ಭಾರತ ಸರ್ಕಾರದ ಆಡಳಿತ ಸುಧಾರಣೆ ಹಾಗೂ ಸಾರ್ವಜನಿಕ ಕುಂದುಕೊರತೆ ಇಲಾಖೆಯು ಇ–ಆಡಳಿತದಲ್ಲಿನ ಮುಖಾಂತರ ಯೋಜನೆಯನ್ನು ಕಾರ್ಯಗತಗೊಳಿಸಲು ಅಳವಡಿಸಿರುವ ಪ್ರಸ್ತುತ ಪ್ರಾಜೆಕ್ಟ್ ಮಾನಿಟರಿಂಗ್ ಸಿಸ್ಟಮ್ ಅನ್ನು ಭಾರತ ಸರ್ಕಾರವು 2013–14ನೇ ಸಾಲಿನಲ್ಲಿ ನೀಡಲು ಉದ್ದೇಶಿಸಿರುವ ಪ್ರಶಸ್ತಿಗಾಗಿ ನೇಮಕ ಮಾಡಲಾಗಿರುತ್ತದೆ.

## VI. ಅನುದಾನ/ಪ್ರಗತಿ (2012–13 ಮತ್ತು 2013–14)

ಮಾರ್ಚ್ 2014 ರ ಅಂತ್ಯಕ್ಕೆ ರೂ.1619.56 ಕೋಟಿ ಅನುದಾನ ನೀಡಲಾಗಿದ್ದು, ಒಟ್ಟು ರೂ.1619.56 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ.

# ಅಧ್ಯಾಯ – 9

## ವಾಸ್ತುಶಿಲ್ಪ ಇಲಾಖೆ

❖ **ಪೀಠಿಕೆ:**

ವಾಸ್ತುಶಿಲ್ಪ ಇಲಾಖೆಯು ದಿನಾಂಕ 30.101986ರಿಂದ ಸ್ವತಂತ್ರ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಇಲಾಖೆಯ ಮುಖ್ಯ ಉದ್ದೇಶವು ಕರ್ನಾಟಕ ರಾಜ್ಯದ ವಿವಿಧ ಸರ್ಕಾರೀ ಇಲಾಖೆಗಳ ಕಟ್ಟಡಗಳಿಗೆ ವಾಸ್ತುಶಿಲ್ಪ ನಕ್ಷೆಗಳನ್ನು ತಯಾರಿಸಿ ಒದಗಿಸುವುದಾಗಿರುತ್ತದೆ. ವಾಸ್ತುಶಿಲ್ಪ ನಕ್ಷೆಗಳನ್ನು ಉಪಯೋಗಿ ಇಲಾಖೆಗಳು ನೀಡಿದ ಅಗತ್ಯತೆಗಳು, ನಿವೇಶನದ ಸ್ಥಿತಿ ಮತ್ತು ನಿಗಧಿತ ಸ್ಥಾಯಿ ಆದೇಶ ಹಾಗೂ ನಿಯಮಗಳನ್ನು ಗಮನದಲ್ಲಿರಿಸಿ ತಯಾರಿಸಲಾಗುತ್ತದೆ.

ಅರೆ ಸರ್ಕಾರಿ, ಸ್ವಾಯತ್ತ ಸಂಸ್ಥೆಗಳು, ಕಾರ್ಪೋರೇಷನ್ ಹಾಗೂ ಅಭಿವೃದ್ಧಿ ಪ್ರಾಧಿಕಾರಗಳು, ಮುನ್ಸಿಪಾಲಿಟಿಗಳು ಮುಂತಾದ ಸಂಸ್ಥೆಗಳು ವಾಸ್ತುಶಿಲ್ಪ ನಕ್ಷೆಗಳನ್ನು ಕೋರಿದಲ್ಲಿ ಈ ಇಲಾಖೆಯು ವಾಸ್ತುಶಿಲ್ಪ ಶುಲ್ಕವನ್ನು ಪಡೆದು ನಕ್ಷೆಗಳನ್ನು ಒದಗಿಸುತ್ತದೆ.

ವಾಸ್ತುಶಿಲ್ಪ ನಕ್ಷೆಯನ್ನು ತಯಾರಿಸಿಕೊಡುವಂತೆ ಉಪಯೋಗಿ ಇಲಾಖೆಗಳಿಂದಾಗಲೀ ತಾಂತ್ರಿಕ ಇಲಾಖೆಗಳಿಂದಾಗಲೀ ಕೋರಿಕೆ ಬಂದಲ್ಲಿ ಸಂಬಂಧಿಸಿದ ಕಟ್ಟಡದ ವಿನ್ಯಾಸದ ಬಗ್ಗೆ ಎಲ್ಲಾ ರೀರಿಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಸಂಬಂಧಿಸಿದ ಕಾಮಗಾರಿಗಳಿಗೆ ವೃತ್ತಿಪರವಾಗಿ, ಕ್ರಿಯಾತ್ಮಕವಾಗಿ ಮತ್ತು ಕಲಾತ್ಮಕವಾದ ನಕ್ಷೆಗಳನ್ನು ತಯಾರಿಸಲಾಗುತ್ತದೆ. ಕೋರಿಕೆಗಳು ಹೊಸ ಕಾಮಗಾರಿಯದಾಗಲೀ ಅಥವಾ ಇರತಕ್ಕಂತಹ ಕಟ್ಟಡಕ್ಕೆ ಸೇರ್ಪಡೆ/ಬದಲಾವಣೆ ಬಗ್ಗೆಯಾಗಲೀ, ಎಲ್ಲವುಗಳಿಗೂ ನಕ್ಷೆಗಳನ್ನು ಪೂರೈಸಲಾಗುತ್ತದೆ ಮತ್ತು ನಿಗಧಿತ ಸಮಯದಲ್ಲಿಯೂ ಸಹ ಒದಗಿಸಲಾಗುತ್ತಿದೆ. ಉದಾಹರಣೆಗೆ. ಯೋಜನಾ ನಕ್ಷೆಯನ್ನು ಆಡಳಿತ ಅನುಮೋದನೆಗೆ ಅಥವಾ ವಿವರವಾದ ನಕ್ಷೆಯನ್ನು ತಾಂತ್ರಿಕ ಮಂಜೂರಾತಿಗೆ ಅಥವಾ ವಿಸ್ತಾರವಾದ ನಕ್ಷೆಯನ್ನು ನಿರ್ಮಾಣ ಹಂತದಲ್ಲಿ ಒದಗಿಸಲಾಗುವುದು ಹಾಗೂ ಈ ಇಲಾಖೆಯ ಅಧಿಕಾರಿಗಳು ವಿವಿಧ ಸ್ಥಳಗಳಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡ ಕಾಮಗಾರಿಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ಕೈಗೊಂಡು ಸಮಸ್ಯೆಗಳಿದ್ದಲ್ಲಿ ಅದನ್ನು ಪರಿಹರಿಸುವ ಬಗ್ಗೆ ಹಾಗೂ ಕಟ್ಟಡವನ್ನು ನಮ್ಮ ನಕ್ಷೆಯನುಸಾರ ನಿರ್ಮಿಸಲಾಗುತ್ತಿದೆಯೇ ಎಂಬ ಬಗ್ಗೆ ದೃಢಪಡಿಸಿಕೊಳ್ಳಲಾಗುವುದು. ಇಲಾಖೆಯಿಂದ ಒದಗಿಸಲಾದ ನಕ್ಷೆಗಳನುಸಾರ ಪೂರ್ಣಗೊಳ್ಳುವಂತೆ ನೋಡಿಕೊಳ್ಳುವುದು ಹಾಗೂ ಅಗತ್ಯತೆ ಇದ್ದಲ್ಲಿ ನಿವೇಶನದ ಆಯ್ಕೆಗೆ ಸಹ ಪರಿವೀಕ್ಷಣೆಯನ್ನು ಕೈಗೊಳ್ಳಲಾಗುವುದು.

ವಾಸ್ತುಶಿಲ್ಪ ನಕ್ಷೆಗಳನ್ನು ತಯಾರಿಸುವಾಗಿ ಬಜೆಟೆಡ್ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುವುದು ಹಾಗೂ ಉಪಯೋಗಿ ಇಲಾಖೆಗಳ ಕೋರಿಕೆಯ ಮೇರೆಗೆ, ವಿವರವಾದ ಇತರೆ ನಕ್ಷೆಗಳನ್ನು ಸಹ ಕಟ್ಟಡ ನಿರ್ಮಾಣದ ವಿವಿಧ ಹಂತಗಳಲ್ಲಿ ಒದಗಿಸಲಾಗುವುದು. ಪ್ರಸ್ತುತ ಸಾಲಿನಲ್ಲಿ ರೂ. ಒಂದು ಕೋಟಿಗಳನ್ನು ಮೀರಿದ ಯೋಜನೆಗಳಿಗಾಗಿ ತಯಾರಿಸಿದ ವಾಸ್ತುಶಿಲ್ಪ ನಕ್ಷೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

❖ **ಆಡಳಿತ**

ವಾಸ್ತುಶಿಲ್ಪ ಇಲಾಖೆಯ ಕೇಂದ್ರ ಕಚೇರಿಯು ಬೆಂಗಳೂರಿನಲ್ಲಿದ್ದು ದಿನಾಂಕ:12.04.2007ರಿಂದ ಶ್ರೀ.ಕೆ.ಉದಯರವರು ಪ್ರಧಾನ ಮುಖ್ಯ ವಾಸ್ತುಶಿಲ್ಪಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಇವರ ನೇತೃತ್ವದಲ್ಲಿ ಉಪ ಮುಖ್ಯ ವಾಸ್ತುಶಿಲ್ಪಿಗಳು, ಉಪ ವಾಸ್ತುಶಿಲ್ಪಿಗಳು, ಹಿರಿಯ ಸಹಾಯಕ ವಾಸ್ತುಶಿಲ್ಪಿಗಳು, ಮತ್ತು ಇತರೇ ತಾಂತ್ರಿಕ ವರ್ಗದ ಸಿಬ್ಬಂದಿಗಳು ವಾಸ್ತುಶಿಲ್ಪಿ ನಕ್ಷೆಗಳನ್ನು ತಯಾರಿಸುತ್ತಿದ್ದಾರೆ. ಪ್ರಧಾನ ಮುಖ್ಯ ವಾಸ್ತುಶಿಲ್ಪಿ ಹಾಗೂ ಇತರೆ ಅಧಿಕಾರಿಕಗಳು ನಿಯತಕಾಲಿಕವಾಗಿ ನಿವೇಶನ ಮತ್ತು ವಿವಿಧ ಹಂತಗಳಲ್ಲಿರುವ ಕಟ್ಟಡ ಯೋಜನೆಗಳ ಪರಿವೀಕ್ಷಣೆ ಕೈಗೊಂಡಿದ್ದಾರೆ. ರಾಜ್ಯದ ಉತ್ತರ ಭಾಗದ ಕೆಲಸ ಕಾರ್ಯಗಳಿಗೆ ವಾಸ್ತುಶಿಲ್ಪ ನಕ್ಷೆಗಳನ್ನು ತ್ವರಿತವಾಗಿ ತಯಾರಿಸಿ ಪೂರೈಸುವ ದೃಷ್ಟಿಯಿಂದ ವಾಸ್ತುಶಿಲ್ಪಿಯವರು ಹಾಗೂ ಈ ಇಲಾಖೆಯ ಇತರೆ ಅಧಿಕಾರಿಗಳು ಈ ಭಾಗದ ಯೋಜನೆ ನಿವೇಶನಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಭೇಟಿ ನೀಡುತ್ತಿದ್ದಾರೆ.

ಈ ಇಲಾಖೆಯು ಗಣಕ ಯಂತ್ರದ ವಿಭಾಗವನ್ನು ಹೊಂದಿದ್ದು ಗಣಕ ಯಂತ್ರಗಳನ್ನು ವಾಸ್ತುಶಿಲ್ಪ ನಕ್ಷೆಗಳ ತಯಾರಿಕೆಗೆ ಹಾಗೂ ಆಡಳಿತ ನಿರ್ವಹಣೆ ವಿಷಯಗಳಿಗೆ ಸಂಬಂಧಿಸಿದಂತೆ ಉಪಯೋಗಿಸಲಾಗುತ್ತಿದೆ.

❖ **<u>ಆರ್ಥಿಕ ವಿವರಣೆ:</u>**

ಸರ್ಕಾರಿ ಕಟ್ಟಡಗಳನ್ನು ಕಟ್ಟಲು ಆರ್ಕಿಟೆಕ್ಟ್ ಫೀಯನ್ನು ವಸೂಲು ಮಾಡುತ್ತಿಲ್ಲ. ಆದರೆ ಅರೆ ಸರ್ಕಾರಿ ಸಂಸ್ಥೆಗಳು, ಕಾರ್ಪೋರೇಷನ್‌ಗಳು ಮತ್ತು ಜಿಲ್ಲಾ ಪರಿಷತ್ ಕಾಮಗಾರಿಗಳು ಮುಂತಾದವುಗಳಿಂದ ಆರ್ಕಿಟೆಕ್ಟ್ ಫೀಯನ್ನು ವಸೂಲು ಮಾಡಲಾಗುತ್ತಿದೆ.

❖ **<u>ಕಾರ್ಯಕ್ರಮ ಪ್ರಗತಿ:</u>**

ವಿವಿಧ ಉಪಯೋಗಿ ಇಲಾಖೆಗಳ ಅಗತ್ಯತೆ ಹಾಗೂ ಬಳಕೆದಾರರ ಹಿತಾಸಕ್ತಿಗನುಗುಣವಾಗಿ ಸಮರ್ಥ ಮತ್ತು ಮಿತವ್ಯಯದ ವಾಸ್ತುಶಿಲ್ಪ ನಕ್ಷೆಗಳನ್ನು ಒದಗಿಸುವುದು ಈ ಇಲಾಖೆಯ ಮುಖ್ಯ ಉದ್ದೇಶವಾಗಿದೆ.

ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪರಿಷ್ಕರಿಸುವ ಅಗತ್ಯತೆ ಇದೆ. ಇದನ್ನು ಪರಿಷ್ಕರಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸದರಿ ಸಾಲಿನ ಅವಧಿಯಲ್ಲಿ (2013–2014) ಸಲ್ಲಿಸುವ ವರ್ಷದಲ್ಲಿ ಈ ಇಲಾಖೆಯು ಸುಮಾರು **646** ವಾಸ್ತುಶಿಲ್ಪ ವಿನ್ಯಾಸಗಳನ್ನು ವಿವಿಧ ಸರ್ಕಾರಿ ಕಟ್ಟಡಗಳ ಯೋಜನೆಗಳಿಗಾಗಿ ತಯಾರಿಸಿದ್ದು ಅವುಗಳ ಅಂದಾಜು ವೆಚ್ಚವು ರೂ. **1289** ಕೋಟಿಗಳಗಿರುತ್ತದೆ.

❖ ಸಮಾಪ್ತಿ:

ಸರ್ಕಾರದ ಉಪಯೋಗಿ ಇಲಾಖೆಗಳ ಹಾಗೂ ಲೋಕೋಪಯೋಗಿ ಇಲಾಖೆಯ ಹೆಚ್ಚಿನ ಸಹಕಾರದಿಂದ ಈ ಇಲಾಖೆಯು ಸಮರ್ಥ ರೀತಿಯಲ್ಲಿ ಕಾರ್ಯನಿರ್ವಹಿಸಿ ಮಿತವ್ಯಯಕಾರಿ, ಆಕರ್ಷಕ ಮತ್ತು ಉಪಯುಕ್ತ ಬಳಕೆಗನುಗುಣವಾದ ವಿನ್ಯಾಸಗಳನ್ನು ಹಾಗೂ ಇತರೆ ಸೇವೆಗಳಿಗೆ ಅವಶ್ಯಕವಾದ ಸವಿಸ್ತಾರ ಪೂರಕ ನಕ್ಷೆಗಳನ್ನು ಸಕಾಲದಲ್ಲಿ ಪೂರೈಸಬಹುದಾಗಿರುತ್ತದೆ.

# ಅಧ್ಯಾಯ – 10

## ಬಂದರು ಮತ್ತು ಒಳನಾಡು ಜಲಸಾರಿಗೆ

**ಬಂದರುಗಳು :–**

ಕರ್ನಾಟಕ ರಾಜ್ಯವು 300 ಕಿ.ಮೀ. ಉದ್ದದ ಕರಾವಳಿ ತೀರವನ್ನು ಹೊಂದಿದ್ದು, ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಈ ಕೆಳಕಂಡ 10 ಕಿರು ಬಂದರುಗಳಾಗಿರುತ್ತವೆ.

| | |
|---|---|
| ಕಾರವಾರ | ಕುಂದಾಪುರ |
| ಬೇಲೇಕೇರಿ | ಹಂಗಾರಕಟ್ಟಾ |
| ತದಡಿ | ಮಲ್ಪೆ |
| ಹೊನ್ನಾವರ | ಪಡುಬಿದ್ರಿ |
| ಭಟ್ಕಳ | ಮಂಗಳೂರು ಹಳೇ ಬಂದರು |

ಕಾರವಾರ ಬಂದರು ಸರ್ವಋತು ಬಂದರಾಗಿದ್ದು, ವಾಣಿಜ್ಯ ಹಡಗುಗಳು ನೇರವಾಗಿ ಧಕ್ಕೆಯಲ್ಲಿ ತಂಗುವ ಸೌಲಭ್ಯವನ್ನು ಹೊಂದಿರುವ ಏಕೈಕ ಕಿರು ಬಂದರಾಗಿರುತ್ತದೆ. ಉಳಿದ ಕಿರು ಬಂದರುಗಳು ನದಿ ಮುಖಜ ಆ್ಯಂಕರೇಜ್ ಲೈಟರೇಜ್ ಬಂದರುಗಳಾಗಿ ಕಾರ್ಯನಿರ್ವಹಿಸುತ್ತಿವೆ. 2013–14 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಾರವಾರ ಬಂದರಿನಲ್ಲಿ 4.53 ಲಕ್ಷ ಮೆ. ಟನ್ ಸರಕು ನಿರ್ವಹಣೆ ನಡೆಸಿ `. 473.00 ಲಕ್ಷ ಆದಾಯಗಳಿಸಿರುತ್ತದೆ.

ಹಳೇ ಮಂಗಳೂರು ಬಂದರು ಗುರುಪುರ ನದಿಯ ಎಡ ದಂಡೆಯ ಮೇಲೆ ನೆಲ ಸ್ಥಾಪಿಸಲಾಗಿದೆ. ಕೋಸ್ಟಲ್ ಶಿಪ್ಪಿಂಗ್ ಚಟುವಟಿಕೆಗಳ ಸಲುವಾಗಿ ಈ ಕಿರು ಬಂದರನ್ನು ಅಭಿವೃದ್ಧಿಪಡಿಸಲಾಗಿದ್ದು, ಪ್ರಮುಖವಾಗಿ ಲಕ್ಷದ್ವೀಪ ನಡುಗಡ್ಡೆಗಳ ಅಗತ್ಯಗಳನ್ನು ಪೂರೈಸುತ್ತಿದೆ. ಮಂಗಳೂರು ಬಂದರಿನಲ್ಲಿ 2013–14 ನೇ ಸಾಲಿನಲ್ಲಿ 0.75 ಲಕ್ಷ ಮೆ. ಟನ್ ಸರಕು ನಿರ್ವಹಣೆ ನಡೆಸಿ `. 206.00 ಲಕ್ಷ ಆದಾಯಗಳಿಸಿರುತ್ತದೆ. ಉಳಿದ ಕಿರು ಬಂದರುಗಳ ಮೂಲಕ 0.02 ಲಕ್ಷ ಮೆ. ಟನ್ ಸರಕು ನಿರ್ವಹಣೆ ಮಾಡಲಾಗಿದ್ದು, `. 2.96 ಲಕ್ಷಗಳ ನೇರ ಆದಾಯ ಗಳಿಸಿದೆ.

2013–14ನೇ ಸಾಲಿನ ಆಯವ್ಯಯದಲ್ಲಿ ಕಿರು ಬಂದರುಗಳ ಅಭಿವೃದ್ಧಿಗಾಗಿ ಒಟ್ಟೂ `. 2802.00 ಲಕ್ಷ ಪರಿಷ್ಕೃತ ಅನುದಾನ ಒದಗಿಸಲಾಗಿದ್ದು, ಕಾರವಾರ ಬಂದರು ಅಭಿವೃದ್ಧಿಗಾಗಿ `. 1434.00 ಲಕ್ಷ, ಮಂಗಳೂರು ಬಂದರು ಅಭಿವೃದ್ಧಿಗಾಗಿ `. 212.00 ಲಕ್ಷ ಹಾಗೂ ಉಳಿದ ಬಂದರುಗಳ ಮತ್ತು ಒಳನಾಡು ಜಲಸಾರಿಗೆ ಅಭಿವೃದ್ಧಿಗಾಗಿ `. 1150.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಈ ಪೈಕಿ `. 1964.95 ಲಕ್ಷ ಮೊತ್ತವನ್ನು ಬಂದರು ಮತ್ತು ಒಳನಾಡು ಜಲಸಾರಿಗೆ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗಿರುತ್ತದೆ.

**ಒಳನಾಡು ಜಲಸಾರಿಗೆ :**

ರಾಜ್ಯದಲ್ಲಿ ಒಟ್ಟೂ 334 ಕಡವುಗಳು/ದೋಣಿವಿಹಾರ ಸೇವೆಗಳಿದ್ದು, ಅವುಗಳ ಪೈಕಿ 15 ಕಡವು ಸೇವೆಗಳನ್ನು ಇಲಾಖಾ ವತಿಯಿಂದ ಯಾಂತ್ರಿಕ ನಾವೆಯನ್ನು ತೊಡಗಿಸಿ ನಡೆಸಲಾಗುತ್ತಿದೆ. 47 ಕಡವು ಸೇವೆಗಳನ್ನು ಗುತ್ತಿಗೆ ಮೂಲಕ ಇಲಾಖೆಯ ತಾಂತ್ರಿಕ ಮೇಲ್ವಿಚಾರಣೆಯಲ್ಲಿ ನಡೆಸಲ್ಪಡುತ್ತಿದೆ. ಇನ್ನುಳಿದ 272 ಕಡವುಗಳನ್ನು ಜಿಲ್ಲಾ ಪಂಚಾಯತ್/ ಪ್ರವಾಸೋದ್ಯಮ/ ಅರಣ್ಯ ಇಲಾಖೆ ಮತ್ತು ಇತರ ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತಿದೆ. ಇಲಾಖೆಯು ಒಟ್ಟೂ 4 ಎಲ್.ಸಿ.ಟಿ. ಮತ್ತು 2 ಮಿನಿ ಎಲ್.ಸಿ.ಟಿ., 5 ಉಕ್ಕಿನ ಯಂತ್ರಚಾಲಿತ ನಾವೆ, 7 ಫೈಬರ್ ಯಂತ್ರಚಾಲಿತ ನಾವೆಗಳು, 14 ಫೈಬರ್ ಮೂಗ ನಾವೆ, 4 ಮರದ ಮೂಗ ನಾವೆಗಳನ್ನು ರಾಜ್ಯದ ವಿವಿಧ ಕಡವುಗಳಲ್ಲಿ ಕಾರ್ಯಾಚರಣೆಗೆ ತೊಡಗಿಸಲಾಗಿರುತ್ತದೆ.

2013–14 ನೇ ಸಾಲಿನಲ್ಲಿ ಇಲಾಖೆಯಿಂದ ನಡೆಸಲ್ಪಡುವ ಕಡವು ಸೇವೆಯಲ್ಲಿ 20,89,956 ಲಕ್ಷ ಪ್ರಯಾಣಿಕರು, 58.7 ಮೆಟ್ರಿಕ್ ಟನ್ ಸರಕು, 1,33,125 ವಿವಿಧ ವಾಹನಗಳನ್ನು ದಾಟಿಸಿ `. 45.54 ಲಕ್ಷ ಆದಾಯ ಗಳಿಸಿದೆ. ಕಡವು ಸೇವೆಗಳಿಗೆ ಹೆಚ್ಚು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ 5 ಎಲ್.ಸಿ.ಟಿ.ಗಳನ್ನು ನಿರ್ಮಿಸಲಾಗುತ್ತಿದೆ.

2012–13 ನೇ ಸಾಲಿನ ಇಲಾಖೆಯ ಆದಾಯ ಹಾಗೂ ವೆಚ್ಚ 2013–14ನೇ ಸಾಲಿನಲ್ಲಿ ರಾಜ್ಯದ ಬಂದರುಗಳಿಂದ `. 764.23 ಲಕ್ಷ ಆದಾಯ ಹಾಗೂ ಒಳನಾಡು ಜಲಸಾರಿಗೆಯಿಂದ `. 49.95 ಲಕ್ಷ ಆದಾಯ ಗಳಿಸಿದೆ. 2013–14ನೇ ಸಾಲಿನಲ್ಲಿ ಇಲಾಖೆಯ ಮೇಲುಸ್ತುವಾರಿ ಮತ್ತು ಆಸ್ತಿ/ನಾವೆಗಳ ನಿರ್ವಹಣೆಗಾಗಿ ಮತ್ತು ಬಂದರುಗಳ ಹಾಗೂ ಕಡವು ಸೇವೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ

(ಯೋಜನೆ ಅಡಿಯಲ್ಲಿ) `. 1964.95 ಲಕ್ಷ ವೆಚ್ಚ ಮಾಡಲಾಗಿದೆ. ಹಾಗೂ (ಯೋಜನೇತರ ಅಡಿಯಲ್ಲಿ) `. 986.98 ಲಕ್ಷ ವೆಚ್ಚ ಮಾಡಲಾಗಿದೆ.

**ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳು :–**

ಕರ್ನಾಟಕ ರಾಜ್ಯದ ಕರಾವಳಿ ತೀರವು ಉತ್ತರ ಭಾಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಮಾಜಾಳಿಯಿಂದ ದಕ್ಷಿಣ ಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಉಳ್ಳಾಲದವರೆಗೆ ಇರುತ್ತದೆ. ಸುಮಾರು 300 ಕಿ. ಮೀ ಉದ್ದದ ಕರಾವಳಿ ತೀರದಲ್ಲಿ ಸುಮಾರು 240.54 ಕಿ.ಮೀ. ಉದ್ದದ ಕರಾವಳಿಯು ಸಮುದ್ರ ಕೊರೆತಕ್ಕೆ ಒಳಗಾಗುತ್ತಿದೆ. ಕಾಳಿ, ಬೇಲೇಕೆರಿ, ಅಘನಾಶಿನಿ, ಗಂಗಾವಳಿ, ಶರಾವತಿ, ಕೊಲ್ಲೂರ, ಸೀತಾನದಿ, ಗುರುಪುರ ನೇತ್ರಾವತಿ ಇತ್ಯಾದಿ 14 ನದಿಗಳು ಅರಬ್ಬೀ ಸಮುದ್ರ ಸೇರುವಲ್ಲಿ ಉಬ್ಬರ ಇಳಿತದ ವ್ಯಾಪ್ತಿಯ ಪ್ರದೇಶಗಳು ಸಹ ನದಿ ದಡ ಕೊರೆತಕ್ಕೆ ಈಡಾಗುತ್ತಿದೆ. ಕರಾವಳಿ ತೀರದುದ್ದಕ್ಕೂ ರಾಷ್ಟ್ರೀಯ ಹೆದ್ದಾರಿ, ಮೀನುಗಾರಿಕೆ ರಸ್ತೆ, ಶಾಲಾ ಕಟ್ಟಡಗಳು, ಜನವಸತಿ ಮನೆ, ಕಟ್ಟಡಗಳು ಇತ್ಯಾದಿ ಸಾರ್ವಜನಿಕ ಆಸ್ತಿಯನ್ನು ಸಮುದ್ರ ಕೊರೆತದಿಂದ ರಕ್ಷಿಸಲು ಶಾಶ್ವತ/ ತಾತ್ಕಾಲಿಕ ಸಮುದ್ರ ಕೊರೆತ ತಡೆಗೋಡೆ ನಿರ್ಮಿಸಲಾಗುತ್ತಿದೆ.

2013–14 ನೇ ಸಾಲಿನಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳಿಗಾಗಿ `. 1069.20 ಲಕ್ಷ ವೆಚ್ಚದಲ್ಲಿ 550 ಮೀ ಉದ್ದದ ತಡೆಗೋಡೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

**ಎ.ಡಿ.ಬಿ. ಯೋಜನೆ :–**

ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಆರ್ಥಿಕ ನೆರವಿನ ಯೋಜನೆ ಅಡಿಯಲ್ಲಿ ಸುಸ್ಥಿರ ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನಾ ಕಾಮಗಾರಿಯನ್ನು ರೂ. 911.00 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಮಂಜೂರಾತಿ ದೊರೆತಿದೆ. ಸದರಿ ಯೋಜನೆಯನ್ನು 3 ಹಂತದಲ್ಲಿ 8 ವರ್ಷಗಳ ಅವಧಿಯಲ್ಲಿ ರಾಜ್ಯದ 3 ಕರಾವಳಿ ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ತೀವ್ರ ಸಮುದ್ರ ಕೊರೆತಕ್ಕೆ ಒಳಗಾಗುವ ಉಳ್ಳಾಲದಲ್ಲಿ ರೂ. 223.32 ಕೋಟಿ ವೆಚ್ಚದಲ್ಲಿ ಮೊದಲನೇ ಹಂತದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. 2013–14ನೇ ಸಾಲಿನಲ್ಲಿ `. 293.93 ಲಕ್ಷ ವೆಚ್ಚವಾಗಿರುತ್ತದೆ.

# ಅಧ್ಯಾಯ – 11

## ಇಲಾಖೆಯ ಪ್ರಗತಿಪರ ಅಭಿವೃದ್ಧಿ ಸಾಧನೆಗಳು

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಆಡಳಿತದಲ್ಲಿ ದಕ್ಷತೆ ಮತ್ತು ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿಗಧಿಪಡಿಸಲು ಕೆಳಕಂಡ ಹಲವಾರು ಕ್ರಮಗಳನ್ನು ಕೈಗೊಂಡಿದೆ.

1. **ವಿದ್ಯುನ್ಮಾನ–ಸಂಗ್ರಹಣೆ ( E-Procurement) :**
ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ ಮತ್ತು ನಿಯಮಗಳಡಿಯಲ್ಲಿ ಹಾಗೂ ಸರ್ಕಾರದ ಅಧಿಸೂಚನೆ ಸಂ.ಸಿಆಸುಇ 2 ಇ ಸಂಗ್ರಹ 2009. ದಿ.09–10–2012ರ ಪ್ರಕಾರ ರೂ.5.00 ಲಕ್ಷಕ್ಕಿಂತ ಹೆಚ್ಚು ಅಂದಾಜು ಮೊತ್ತದ ಕಾಮಗಾರಿಗಳನ್ನು ಇ ಪೋರ್ಟಲ್ ಮೂಲಕ ಟೆಂಡರ್ ಕರೆದು ನಿರ್ವಹಣೆ ಮಾಡಲಾಗುತ್ತಿದೆ. ಲೋಕೋಪಯೋಗಿ ಇಲಾಖೆಯಲ್ಲಿ 2013–14ನೇ ಸಾಲಿನಲ್ಲಿ ರೂ. 8072 ಕೋಟಿ ಮೊತ್ತದ 13966 ಟೆಂಡರ್‌ಗಳನ್ನು ವಿದ್ಯುನ್ಮಾನ ಸಂಗ್ರಹಣೆ ಮುಖಾಂತರ ವ್ಯವಹರಿಸಲಾಗಿದೆ.
2. **ಇಲಾಖೆಯ ಸಾಧನೆ ಹಾಗೂ ಪ್ರಗತಿ ವರದಿಯನ್ನು ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಕೆ :**
ಇಲಾಖೆಯ ವೆಬ್‌ಸೈಟ್‌ನಲ್ಲಿ ಅವಶ್ಯಕ ಮಾಹಿತಿಗಳನ್ನು, ಕೆಲವು ಮುಖ್ಯವಾದ ದಾಖಲೆಗಳನ್ನು, ಸರ್ಕಾರದ ಆದೇಶಗಳನ್ನು ಮತ್ತು ಕಾಮಗಾರಿಗಳ ಪ್ರಗತಿ ವರದಿಯನ್ನು ಗಣಕೀಕೃತಗೊಳಿಸಿ ಅಳವಡಿಸಲಾಗಿದೆ. ಅಲ್ಲದೇ, ಇಲಾಖೆಯ ಸಾಂಸ್ಥಿಕ ವಿವರ, ಯೋಜನೆಗಳು, ರಸ್ತೆ ಜಾಲ, ಮಾಹಿತಿ ಹಕ್ಕು ಅಧಿನಿಯಮ, ಟೆಂಡರ್‌ಗಳು, ನೇಮಕಾತಿ, ಸಂಪರ್ಕ ವಿವರ ಮತ್ತು ಲೋಕೋಪಯೋಗಿ ಇಲಾಖೆಯ ವಸತಿಗೃಹಗಳ ಮಾಹಿತಿ, ವೆಬ್ ಆಧಾರಿತ ರಸ್ತೆ ಮಾಹಿತಿ ವ್ಯವಸ್ಥೆ, ಇಲಾಖಾ ಸುದ್ದಿ ಮತ್ತು ಘಟನೆಗಳು ಹಾಗೂ ಇಲಾಖೆಯ ಎಂಪಿಕ್‌ಗಳು, ನಾಗರೀಕ ಸನ್ನದ್ದು ಹಾಗೂ 2013–14ನೇ ಸಾಲಿನ ಫಲಿತಾಂಶ ಚೌಕಟ್ಟು ದಾಖಲೆಗಳ ಮಾಹಿತಿಯನ್ನು ಸಹಾ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್‌ನ್ನು ( www.kpwd.gov.in) ವೀಕ್ಷಿಸಬಹುದು.

3. **ಕಾಮಗಾರಿಗಳ ಪ್ರಗತಿಗಳನ್ನು ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸುವಿಕೆ :** ಲೋಕೋಪಯೋಗಿ ಇಲಾಖೆಯ ಎಲ್ಲಾ ಕಾಮಗಾರಿಗಳ ವಿವರಗಳನ್ನು ವೆಬ್ ಬೇಸ್ಡ್ ತಂತ್ರಾಂಶಗಳನ್ನು ಅಳವಡಿಸಿ ಮಾಹಿತಿಗಳನ್ನು ತುಂಬಲಾಗುತ್ತಿದೆ. ಎಲ್ಲಾ ಅಧಿಕಾರಿಗಳಿಗೂ ತಂತ್ರಾಂಶ ಉಪಯೋಗಿಸಲು ಅನುಕೂಲ ಕಲ್ಪಿಸಲಾಗಿದೆ. ಇಲಾಖೆಯ ಎಲ್ಲಾ ಕಾಮಗಾರಿಗಳ ವಿವರಗಳ ಪ್ರಗತಿಯನ್ನು On-lineನಲ್ಲಿ ತುಂಬಲಾಗುತ್ತಿದೆ. ಈ ವ್ಯವಸ್ಥೆಯಲ್ಲಿ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಗುರಿ ಮತ್ತು ಎಲ್ಲಾ ವಿವರಗಳನ್ನು ನಿಯಮಿತವಾಗಿ ತುಂಬಲಾಗುತ್ತಿದ್ದು, ಪ್ರಗತಿ ಪರಿಶೀಲನೆಗಾಗಿ ಹಾಗೂ ಹಣ ಬಿಡುಗಡೆಗಾಗಿ ಈ ವ್ಯವಸ್ಥೆಯನ್ನು ಉಪಯೋಗಿಸಲಾಗುತ್ತಿದೆ.
4. **ಇಲಾಖೆಯ ನಾಗರೀಕ ಸನ್ನದ್ದು:** ಲೋಕೋಪಯೋಗಿ ಇಲಾಖೆಯ ಕಾರ್ಯವ್ಯಾಪ್ತಿ, ಅಧೀನ ಕಛೇರಿಗಳ ಮಾಹಿತಿ ಹಾಗೂ ಇಲಾಖೆಯ ವತಿಯಿಂದ ಸಾರ್ವಜನಿಕರಿಗೆ ಒದಗಿಸಲಾಗುವ ಸೇವೆಗಳ ಅವಧಿಯ ವಿವರಗಳನ್ನೊಳಗೊಂಡ "ನಾಗರೀಕಸನ್ನದ್ದು 2011" ಅನ್ನು ತಯಾರಿಸಲಾಗಿದ್ದು, 2012 ರಲ್ಲಿ ಮತ್ತೆ ಪರಿಷ್ಕರಿಸಿ ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಲಾಗಿದೆ.

5. **ಸಕಾಲ ಸೇವೆ :** ಇಲಾಖೆಯ ನಾಗರೀಕ ಸನ್ನದ್ದಿನಲ್ಲಿ ಸೇರಿಸಿರುವಂತೆ ಸಾರ್ವಜನಿಕರಿಗೆ ನೀಡಲಾಗುವ 34 ಸೇವೆಗಳನ್ನು ಸಕಾಲ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ.

6. **ರಸ್ತೆಗಳ ಗುಣಮಟ್ಟ ಸಮೀಕ್ಷೆ ( Roads Condition Survey)**
2001 ರಿಂದ ಇಲಾಖೆಯಲ್ಲಿ ವಾರ್ಷಿಕವಾಗಿ ರಸ್ತೆಗಳ ಗುಣಮಟ್ಟದ ಸಮೀಕ್ಷೆಯನ್ನು Romdas (Road Measurement and Data Acquistion System) ಉಪಯೋಗಿಸಿಕೊಂಡು ಮಾಡಲಾಗುತ್ತಿದೆ. ಈ ಸಮೀಕ್ಷೆಯಿಂದ ರಸ್ತೆಯ ಮೇಲ್ಮೈನ ಉರುಟುವಿಕೆ (Roughness), IRI ಸಂಖ್ಯೆ ಮಾಹಿತಿಯನ್ನು ರಸ್ತೆ ಮಾಹಿತಿ ವ್ಯವಸ್ಥೆಯಲ್ಲಿ ಅಳವಡಿಸಲಾಗುತ್ತಿದೆ.

7. **ರಸ್ತೆ ಮಾಹಿತಿ ವ್ಯವಸ್ಥೆ (Road Information System) :**
ರಸ್ತೆ ಮಾಹಿತಿ ವ್ಯವಸ್ಥೆಯನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರದ ಮೇಲೆ ಅಭಿವೃದ್ಧಿಪಡಿಸಲಾಗಿದೆ. ರಸ್ತೆ ಮಾಹಿತಿ ವ್ಯವಸ್ಥೆಯು ಇಲಾಖೆಯ ರಸ್ತೆಗಳ ಸಂಪರ್ಕ ಹಾಗೂ ಸ್ಥಿತಿಯ ಬಗ್ಗೆ ಮಾಹಿತಿ ಒದಗಿಸುತ್ತದೆ.

8. **ರಸ್ತೆ ಬಳಕೆದಾರರ ಅನಿಸಿಕೆಗಳ ಸರ್ವೆ:–**

ಸದರಿ ಸರ್ವೆಯನ್ನು ಪ್ರಪ್ರಥಮ ಬಾರಿಗೆ ಮೇ 2002 ರಲ್ಲಿ ಕೈಗೊಳ್ಳಲಾಯಿತು ಹಾಗೂ ಎರಡನೇ ಬಾರಿ ಜನವರಿ 2004 ರಲ್ಲಿ ಮತ್ತು ಮೂರನೆಯ ಬಾರಿಗೆ ಅಕ್ಟೋಬರ್ 2007 ರಲ್ಲಿ ಕೈಗೊಳ್ಳಲಾಗಿದ್ದು ರಸ್ತೆ ಬಳಕೆದಾರರ ಅನಿಸಿಕೆಗಳನ್ನು ಅಧ್ಯಯನ ಮಾಡಲಾಗಿದೆ.

9. **ವಾಹನ ಸಂಚಾರ ಗಣತಿ :–**
ಕರ್ನಾಟಕದಲ್ಲಿ ರಸ್ತೆ ವಾಹನ ಸಂಚಾರ ಗಣತಿಯನ್ನು 1956 ರಿಂದ ಕೈಗೊಳ್ಳಲಾಗುತ್ತಿದ್ದು ಪ್ರತಿ ವರ್ಷವೂ ಮಾದರಿ ಸಮೀಕ್ಷೆಯನ್ನು 2 ದಿನಗಳ ಕಾಲ ಹಾಗೂ 5 ವರ್ಷಗಳಿಗೊಮ್ಮ 7 ದಿನಗಳ ಕಾಲ ಎಲ್ಲಾ ರಸ್ತೆಗಳ ಮೇಲೆ ವಾಹನ ಸಂಚಾರ ಗಣತಿಯ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ರಸ್ತೆ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

**10. ಕಾಮಗಾರಿಗಳನ್ನು ವಿಭಜಿಸಿ ಟೆಂಡರ್ ಕರೆಯುವಂತಿಲ್ಲ :**
ಸರ್ಕಾರದ ಸುತ್ತೋಲೆ ಸಂ.ಲೋಇ 243 ಇಎಪಿ 2011. ದಿ.14–03–2011 ಮತ್ತು ಲೋಇ 07 ಐಎಫ್ಎ 2013 ದಿನಾಂಕ: 16–01–2013 ರಲ್ಲಿ ಒಂದೇ ರಸ್ತೆಯ ವಿವಿಧ ಭಾಗಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದಲ್ಲಿ ಅಂತಹ ಎಲ್ಲ ಭಾಗಗಳ ಯೋಜನೆ/ಯೋಜನೇತರ ಅಡಿಯಲ್ಲಿ ಕೈಗೊಳ್ಳುವ ರಸ್ತೆ ಕಾಮಗಾರಿಗಳನ್ನು ಒಟ್ಟುಗೂಡಿಸಿ (reaches) ಪ್ಯಾಕೇಜ್ ಮಾಡಿ ಟೆಂಡರ್ ಕರೆಯುವ ಮೂಲಕ ನಿರ್ವಹಿಸಲು ಸೂಚನೆ ನೀಡಲಾಗಿದೆ.

**11. ಮರಳು ಗಣಿಗಾರಿಕೆ:** ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದಾಗ್ಯೂ, ಸರ್ಕಾರದ ನಿರ್ದೇಶನದಂತೆ, ರಾಜ್ಯದಲ್ಲಿ ಮರಳು ಬ್ಲಾಕ್‌ಗಳನ್ನು ಗುರುತಿಸಿ, ಟೆಂಡರ್ ಕರೆದು, ಹೊರತೆಗೆದ ಮರಳನ್ನು ಮಾರಾಟ ಮಾಡಲಾಗುತ್ತಿದ್ದು, ಈ ವಹಿವಾಟಿನಿಂದ 2013–14ನೇ ಸಾಲಿನಲ್ಲಿ ರಾಜಧನ, ದಂಡ ವಿಧಿಸಿದ ಮೊತ್ತವು ಸೇರಿದಂತೆ ಒಟ್ಟು ರೂ.139.07 ಕೋಟಿ ರಾಜಸ್ವ ಸಂಗ್ರಹ ಮಾಡಿ ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡಲಾಗಿದೆ.

**12. ಗುಣ ನಿಯಂತ್ರಣ ವ್ಯವಸ್ಥೆ ಬಲಪಡಿಸುವುದು:** ಪ್ರಸ್ತುತ ಗುಣ ನಿಯಂತ್ರಣ ವಿಭಾಗಗಳ ಮುಖ್ಯಸ್ಥರಾಗಿ, ಅಧೀಕ್ಷಕ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದು, ಈ ಹುದ್ದೆಯನ್ನು ಮುಖ್ಯ ಅಭಿಯಂತರರ ಹುದ್ದೆಗೆ ಮೇಲ್ದರ್ಜೆಗೇರಿಸುವ ಮೂಲಕ ಪ್ರತ್ಯೇಕ ಇಲಾಖಾ ಮುಖ್ಯಸ್ಥರನ್ನಾಗಿಸಿ ಸದರಿ ವಲಯಕ್ಕೆ ಉನ್ನತ ತಂತ್ರಜ್ಞಾನದ ಆಧುನಿಕ ಉಪಕರಣ ಹಾಗೂ ಪ್ರಯೋಗಶಾಲೆ ಒದಗಿಸಿ ಹೆಚ್ಚಿನ ಕಾರ್ಯ ಕ್ಷಮತೆ ಹೊಂದಲು ಉದ್ದೇಶಿಸಲಾಗಿದೆ.

**13. ಉಸ್ತುವಾರಿ ಕೋಶ ಸ್ವತಂತ್ರವನ್ನಾಗಿಸುವುದು:** ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯದಲ್ಲಿ ಸೃಜಿಸಲಾಗಿರುವ ಉಸ್ತುವಾರಿ ಕೋಶವನ್ನು ಜಾಗೃತ ದಳವನ್ನಾಗಿ ಪರಿವರ್ತಿಸಿ, ಸದರಿ ದಳದ ಮುಖ್ಯಸ್ಥರನ್ನಾಗಿ ಮುಖ್ಯ ಅಭಿಯಂತರರ ಹುದ್ದೆ ಹಾಗೂ ಇನ್ನಿತರ ಅಗತ್ಯ ಹುದ್ದೆಗಳನ್ನು ಸೃಜಿಸಲು ಉದ್ದೇಶಿಸಲಾಗಿದೆ.

**14. ಇಲಾಖಾ ಸಂಹಿತೆ (D-Code) ಪರಿಷ್ಕರಣೆ :** ವಿಶ್ವ ಬ್ಯಾಂಕ್‌ನ Country Procurement Report ನಲ್ಲಿ ಅಭಿಪ್ರಾಯ ಲೋಕೋಪಯೋಗಿ ಇಲಾಖಾ ಸಂಹಿತೆಯು 1956ರಲ್ಲಿ ಜಾರಿಗೆ ಬಂದಿದ್ದು ಇತ್ತೀಚಿನ ನಿರ್ಮಾಣ ಕ್ಷೇತ್ರದಲ್ಲಿನ ತಾಂತ್ರಿಕ ಬೆಳವಣಿಗೆ, ಹೊಸ ನಿರ್ಮಾಣ ರೀತಿ ನೀತಿಗಳ ಹಿನ್ನೆಲೆಯಲ್ಲಿ ಇಲಾಖಾ ಸಂಹಿತೆ 1 ಮತ್ತು 2 ಪರಿಷ್ಕರಿಸುವ ಅವಶ್ಯಕತೆ ಇರುತ್ತದೆ. ಅದರಂತೆ ಪರಿಷ್ಕೃರಿಸಲಾದ ಕರಡು ಇಲಾಖೆ ಸಂಹಿತೆ ಸಂಪುಟ 1 ಮತ್ತು 2ಕ್ಕೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆಯಲಾಗಿದ್ದು, ಸದರಿ ಸಂಹಿತೆಯಲ್ಲಿ ಹೊಸ ಭೂಸ್ವಾಧೀನ ಅಧಿನಿಯಮದ ಅವಕಾಶವನ್ನು ಸಹ ಸೇರ್ಪಡೆ ಮಾಡಲು ಪರಿಶೀಲಿಸಲಾಗುತ್ತಿದೆ.

**15. ತರಬೇತಿ ಕಾರ್ಯಕ್ರಮಗಳು** : 2013–14 ನೇ ಸಾಲಿನಲ್ಲಿ 969 ಅಧಿಕಾರಿ ಹಾಗೂ ನೌಕರರುಗಳಿಗೆ ವಿವಿಧ ವಿಷಯಗಳಲ್ಲಿ ತರಬೇತಿ ನೀಡಲಾಗಿದೆ. ಈ ತರಬೇತಿಗಳನ್ನು ಪ್ರಖ್ಯಾತ ಸಂಸ್ಥೆಗಳ ವತಿಯಿಂದ ನೀಡಲಾಗಿದೆ.ಆರ್.ಎಫ್.ಡಿ ಯ ಅನುಸಾರ ಪ್ರತಿ ವರ್ಷ 1000 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡಲು ಕ್ರಮ ವಹಿಸಲಾಗುತ್ತಿದೆ.

## ಅಧ್ಯಾಯ–12

# ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರದ ಸ್ಥಾಪನೆ

ಪೀಠಿಕೆ:

ವಿಶ್ವ ಬ್ಯಾಂಕ್ ಮತ್ತು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು KSHIP-II ಗೆ ಸಾಲ ನೀಡುವ ಕುರಿತು ನಡೆಸಲಾದ ಚರ್ಚೆಯಲ್ಲಿ ಲೋಕೋಪಯೋಗಿ ಇಲಾಖೆಯು ಸಾಲ ಮಂಜೂರಾತಿ ಪ್ರಕ್ರಿಯೆಯಲ್ಲಿ ಅವಶ್ಯಕವಾಗಿ ಅನುಸರಿಸಬೇಕಾದ ಸಾಂಸ್ಥಿಕ ಬಲಪಡಿಸುವಿಕೆ ಮತ್ತು ಸಾಮರ್ಥ್ಯ ಅಭಿವೃದ್ಧಿಗೊಳಿಸುವ ಕ್ರಮಗಳ ಕುರಿತು ಹಲವಾರು ಅಂಶಗಳನ್ನು ಸೂಚಿಸಿರುತ್ತಾರೆ. ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ವಿಶ್ವ ಬ್ಯಾಂಕ್‌ನ ಜಂಟಿ ಸಮಿತಿಯು ಜೂನ್, 2010 ರಲ್ಲಿ ಲೋಕೋಪಯೋಗಿ ಇಲಾಖೆಯೊಂದಿಗೆ ವಿಸ್ತೃತವಾಗಿ ಚರ್ಚಿಸಿ ಸಾಂಸ್ಥಿಕ ಅಭಿವೃದ್ಧಿ ಮತ್ತು ಕಾರ್ಯತಂತ್ರ ಕಾರ್ಯಗತ ಯೋಜನೆ [Institutional Development and Strategy Action Plan (IDSAP)] ಯನ್ನು ಅನುಸರಿಸಲೇಬೇಕಾದ ಮೂಲ ಚೌಕಟ್ಟಿನ ಕಾರ್ಯವೆಂದು ಒಪ್ಪಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವನ್ನು [Planning and Road Asset Management Centre (PRAMC)] ಸ್ಥಾಪಿಸುವುದು IDSAP ಒಂದು ಪ್ರಮುಖ ಉದ್ದೇಶವಾಗಿರುತ್ತದೆ ಹಾಗೂ ಈ ಕೇಂದ್ರವು ರಸ್ತೆ ವಲಯಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಕುರಿತ ಎಲ್ಲಾ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ತಯಾರಿಸುವ ಮತ್ತು ರಸ್ತೆಗಳಿಗೆ ಸಂಬಂಧಿಸಿದಂತೆ ಆಸ್ತಿ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಉದ್ದೇಶಗಳು:

ಈಗ ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು ಲೋಕೋಪಯೋಗಿ ಇಲಾಖೆಯ ವಿಶೇಷವಾಗಿ ರಸ್ತೆ ವಲಯದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಾಗೂ ಇತರೆ ಅವಶ್ಯಕ ಕಾರ್ಯಗಳನ್ನು ಬಲಪಡಿಸಲು ಸ್ಥಾಪಿತವಾಗಿದೆ PRAMC ಯು ಲೋಕೋಪಯೋಗಿ ಇಲಾಖೆಯ ಮಟ್ಟದಲ್ಲಿ ರಸ್ತೆಯ ವಲಯದಲ್ಲಿ ನೀತಿ ತಯಾರಿಸುವ, ಯೋಜನೆ ಮತ್ತು ರಸ್ತೆಗಳ ನಿರ್ವಹಣೆ ಮಾಡುವ ವಿಷಯದಲ್ಲಿ 'ವಲಯದ ಸರ್ವೋಚ್ಛ ಸಂಸ್ಥೆಯಾಗಿ' ಕಾರ್ಯ ನಿರ್ವಹಿಸಲಿದೆ.

ಈ ಕೆಳಕಂಡವುಗಳು PRAMC ಯ ಉದ್ದೇಶಗಳು:

- ಲೋಕೋಪಯೋಗಿ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಕರ್ನಾಟಕದ ರಸ್ತೆಗಳ ಯೋಜನೆ, ಆಯವ್ಯಯ ಮತ್ತು ಕಾರ್ಯಕ್ರಮಗಳನ್ನು ತಯಾರಿಸುವಲ್ಲಿ ಒಂದು ನೋಡಲ್ ಘಟಕವಾಗಿ ಕಾರ್ಯ ನಿರ್ವಹಿಸುವುದು.
- ಲೋಕೋಪಯೋಗಿ ಇಲಾಖೆಯಲ್ಲಿ ಯೋಜನೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳನ್ನು ಉತ್ತಮಪಡಿಸುವುದು.
- ಮಾಹಿತಿ ತಂತ್ರಜ್ಞಾನವನ್ನು ದಕ್ಷವಾಗಿ ಮತ್ತು ಪರಿಣಾಮಕಾರಿಯಾಗಿ ಉಪಯೋಗಿಸುವುದು ಮತ್ತು ಲೋಕೋಪಯೋಗಿ ಇಲಾಖೆಯಾದ್ಯಂತ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಕಾರ್ಯ ನಿರ್ವಹಿಸುವುದು.
- ತರಬೇತಿ ಮುಖಾಂತರ ಮಾನವ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಕಾರ್ಯ ನಿರ್ವಹಿಸುವುದು.
- ತರಬೇತಿ ಮುಖಾಂತರ ಮಾನವ ಸಂಪನ್ಮೂಲ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಮತ್ತು ಇಲಾಖೆಯಲ್ಲಿ ತರಬೇತಿ ಮೂಲಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.
- ರಸ್ತೆಯ ಮೇಲ್ಮೈಯನ್ನು ನಿರ್ವಹಿಸುವ ವ್ಯವಸ್ಥೆ (Pavement Management System)ನ್ನು ಜಾರಿಗೊಳಿಸುವುದು.
- ರಸ್ತೆ ಮಾಹಿತಿ ವ್ಯವಸ್ಥೆಯನ್ನು [Road Information System (RIS)] ನಿರಂತರವಾಗಿ ನಿರ್ವಹಿಸುವುದು ಮತ್ತು ಅಪ್‌ಡೇಟ್‌ಮಾಡುವುದು.
- ಕಾಲಕಾಲಕ್ಕೆ ವಹಿಸುವ ಇನ್ನಿತರ ಯಾವುದೇ ಕರ್ತವ್ಯಗಳನ್ನು ನಿರ್ವಹಿಸುವುದು.

ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ (PRAMC) ಯ ಉಪ ಘಟಕಗಳು ಈ ರೀತಿ ಇದೆ:

1. ನೀತಿಗಳನ್ನು ಯೋಜಿಸುವ ಘಟಕ
2. ಕಾರ್ಯಕ್ರಮಗಳನ್ನು ರೂಪಿಸುವ ಘಟಕ
3. ರಸ್ತೆ ಸುರಕ್ಷತಾ ಘಟಕ
4. ಮಾಹಿತಿ ತಂತ್ರಜ್ಞಾನ ಘಟಕ
5. ತರಬೇತಿ ಘಟಕ

**ಸಮಾಪ್ತಿ:**

ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಸಹಾಯದಡಿಯಲ್ಲಿ ಸಮಾಲೋಚಕರ ಸೇವೆಯನ್ನು ಪಡೆಯಲು M/s. EGIS International ಸಮಾಲೋಚಕರ ತಂಡವನ್ನು ಸ್ಥಾಪಿಸಲಾಗಿದ್ದು ಸದರಿ ಸಮಾಲೋಚಕರು ಕಾರ್ಯಪ್ರವೃತ್ತರಾಗಿದ್ದಾರೆ. ಸಮಾಲೋಚಕರ ತಂಡವು ದಿ:12–2–2013 ರಿಂದ ಕರ್ತವ್ಯವನ್ನು ಪ್ರಾರಂಭಿಸಿರುತ್ತಾರೆ. ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ (PRAMC) ಯ ಅಡಿಯಲ್ಲಿ ಒಟ್ಟಾರೆ 51 ಹುದ್ದೆಗಳು ಮಂಜೂರಾಗಿದ್ದು, ಈ ಘಟಕವನ್ನು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಕಾರ್ಯದರ್ಶಿಗಳ ನಿರ್ದೇಶನದಡಿ ಕಾರ್ಯ ನಿರ್ವಹಿಸುತ್ತಿದ್ದಾರೆ.